# ಕರ್ನಾಟಕ ವಿಧಾನ ಪರಿಷತ್ತು

## ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಗೋವಿಂದರಾಜು ರವರ ನಿಯಮ 72 ರಡಿ ಮಂಡಿಸಿರುವ ಗಮನ ಸೆಳೆಯುವ ಸೂಚನೆ

**ಸೂಚನೆ:**

ಕೋಲಾರ, ಚಿಕ್ಕಬಳ್ಳಾಪುರ, ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಅತೀ ಹೆಚ್ಚು ಕೋಳಿ ಸಾಕಾಣಿಕೆದಾರರಿದ್ದು, ಈ ಜಿಲ್ಲೆಗಳು ಕೋಳಿ ಸಾಕಾಣಿಕೆಗೆ ಇಡೀ ಭಾರತ ದೇಶದಲ್ಲಿ ಇಲ್ಲದಂತಹ ಒಳ್ಳೆಯ ವಾತಾವರಣ ಹೊಂದಿದೆ, ಇಲ್ಲಿ ಉತ್ಪಾದನೆ ಆಗುವ ತಾಯಿ ಕೋಳಿ ಮೊಟ್ಟೆಗಳು ಇಡೀ ದೇಶಕ್ಕೆ ಹಾಗೂ ಅರಬ್ಬ್ ದೇಶಕ್ಕೆ ರಫ್ತಾಗುತ್ತದೆ. ಮಾಂಸದ ಕೋಳಿ ಸಾಕಾಣಿಕೆಗೂ ಸಹ ಒಳ್ಳೆಯ ವಾತಾವರಣವಿದ್ದು, ಇವುಗಳನ್ನು ರೈತರಿಗೆ ತಮ್ಮ ಉಪ ಕಸಬುನ್ನಾಗಿಸಿ ಸಣ್ಣ ಸಣ್ಣ ಪ್ರಮಾಣದಲ್ಲಿ ಕೋಳಿ ಸಾಕಾಣಿಕೆ ಮಾಡಲು ಅವಕಾಶವಿದ್ದು, ಈಗಾಗಲೇ ಸಾಕಷ್ಟು ರೈತರು ತಮ್ಮಲ್ಲಿರುವ ಚಿಕ್ಕ ಚಿಕ್ಕ ಜಮೀನಿನಲ್ಲಿ ಕೋಳಿ ಸಾಕಾಣಿಕೆಯಲ್ಲಿ ತೊಡಗಿಸಿಕೊಂಡಿರುತ್ತಾರೆ. ಆದರೆ ಸರ್ಕಾರದಿಂದ ಇಂತಹ ರೈತರಿಗೆ ಯಾವುದೇ ರೀತಿಯ ಪ್ರೋತ್ಸಾಹ, ಕೋಳಿಗಳಿಗೆ ರೋಗ ರುಜಿನಗಳು ಬಂದಾಗ, ಪಶುವೈದ್ಯಾಧಿಕಾರಿಗಳ ಕೊರತೆ ಹಾಗೂ ಕೋಳಿ ಸಾಕಾಣಿಕೆಯಲ್ಲಿ ಆಗಿರುವ ಉತ್ತಮ ತಾಂತ್ರಿಕತೆಯ ತಂತ್ರಜ್ಞಾನದಿಂದ ವಂಚಿತರಾಗಿರುತ್ತಾರೆ. ಈ ಎಲ್ಲ ವಿಷಯಗಳನ್ನು ಮಾನ್ಯ ಪಶುಸಂಗೋಪನಾ ಸಚಿವರ ಗಮನ ಸೆಳೆಯಲು ಬಯಸುತ್ತೇನೆ.

**ಹೇಳಿಕೆ:**

ಕೋಳಿ ಸಾಕಾಣಿಕೆಯಲ್ಲಿ ತೊಡಗಿಸಿಕೊಂಡಿರುವ ರೈತರಿಗೆ ಪ್ರೋತ್ಸಾಹ ನೀಡಲು ಕರ್ನಾಟಕ ಸಹಕಾರ ಕುಕ್ಕುಟ ಮಹಾಮಂಡಳ ನಿಯಮಿತ, ಬೆಂಗಳೂರು ವತಿಯಿಂದ ಕೆಳಕಂಡ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ.

1. ಕರ್ನಾಟಕ ಸಹಕಾರ ಕುಕ್ಕುಟ ಮಹಾಮಂಡಳ ನಿಯಮಿತ, ಬೆಂಗಳೂರು ವತಿಯಿಂದ 2021–22ನೇ ಸಾಲಿನಲ್ಲಿ ಕೋಳಿ ಸಾಕಾಣಿಕೆ ಬಗ್ಗೆ ಆಸಕ್ತಿ ಇರುವ 1000 ರೈತರಿಗೆ ತರಬೇತಿಯನ್ನು ನೀಡಲಾಗಿದೆ.
2. ಕರ್ನಾಟಕ ಸಹಕಾರ ಕುಕ್ಕುಟ ಮಹಾಮಂಡಳ, ನಿ, ಬೆಂಗಳೂರು ವತಿಯಿಂದ 2021–22ನೇ ಸಾಲಿನಲ್ಲಿ, ಬೆಂಗಳೂರು ವಿಭಾಗದ 50 ಪಶುವೈದ್ಯಾಧಿಕಾರಿಗಳಿಗೆ ಆಧುನಿಕ ಕೋಳಿ ಸಾಕಾಣಿಕೆ ಬಗ್ಗೆ ತರಬೇತಿಯನ್ನು ನೀಡಲಾಗಿದೆ.
3. ಕೋಳಿ ಸಾಕಾಣಿಕೆ ಬಗ್ಗೆ ಆಸಕ್ತಿ ಇರುವ ರೈತರನ್ನು ಒಗ್ಗೂಡಿಸಿ ಬೆಂಗಳೂರು ವಿಭಾಗದ ಕೋಲಾರ ಜಿಲ್ಲೆಯಲ್ಲಿ ಒಂದು ರೈತ ಉತ್ಪಾದಕ ಸಂಸ್ಥೆಯನ್ನು ರಚಿಸಲು ಕ್ರಮಕೈಗೊಳ್ಳಲಾಗಿದೆ.
4. ಪ್ರತಿ ತಾಲ್ಲೂಕಿನ 42 ಫಲಾನುಭವಿಗಳಿಗೆ 5 ವಾರದ ಅಸೀಲ್/ನಾಟಿ ಕೋಳಿ ಮರಿಗಳನ್ನು, ಪ್ರತಿ ಫಲಾನುಭವಿಗೆ 38 ಕೋಳಿ ಮರಿಗಳನ್ನು ಉಚಿತವಾಗಿ ವಿತರಿಸಲಾಗಿದೆ.
5. BV380 ಮೊಟ್ಟೆ ಕೋಳಿಗಳನ್ನು ಸಾಕಾಣಿಕೆ ಮಾಡಲು ಸಹಾಯಧನದೊಂದಿಗೆ (ಸಾಮಾನ್ಯ ಶೇ.50%, ಎಸ್.ಸಿ/ಎಸ್.ಟಿ ಶೇ.90%), ಸರ್ಕಾರದ ಯೋಜನೆಯನ್ನು ಅನುಷ್ಠಾನಗೊಳಿಸಲು ಕ್ರಮಕೈಗೊಳ್ಳಲಾಗಿದೆ.
6. ಕೋಳಿ ಸಾಕಾಣಿಕೆ ಆಸಕ್ತಿ ಇರುವ ರೈತರಿಗೆ ಕೋಳಿ ಮಾಂಸ ಮತ್ತು ಮೊಟ್ಟೆ ಖಾದ್ಯ ತಯಾರು ಮಾಡುವ ಬಗ್ಗೆ ತಾಂತ್ರಿಕ ತರಬೇತಿ ನೀಡಿ (ಘಟಕದ ಮೊತ್ತ ರೂ. 50,000/–) ಶೇ. 100% ರಷ್ಟು ಸಹಾಯಧನದೊಂದಿಗೆ, ಬೆಂಗಳೂರು ವಿಭಾಗದಲ್ಲಿ 10 ಫಲಾನುಭವಿಗಳಿಗೆ ಸರ್ಕಾರಿ ಯೋಜನೆಯನ್ನು ಅನುಷ್ಠಾನಗೊಳಿಸಲು ಕ್ರಮಕೈಗೊಂಡಿದೆ.
7. ಕರ್ನಾಟಕ ಸಹಕಾರ ಕುಕ್ಕುಟ ಮಹಾಮಂಡಳ ನಿಯಮಿತ, ಬೆಂಗಳೂರು ರವರ ಕಛೇರಿಯಲ್ಲಿ ಒಟ್ಟು 206 ಕುಕ್ಕುಟ ಸಹಕಾರ ಸಂಘಗಳು ನೋಂದಣಿಯಾಗಿರುತ್ತವೆ.
8. ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆಯ ಪಶುವೈದ್ಯಕೀಯ ಸಂಸ್ಥೆಗಳ ಮೂಲಕ ಕೋಳಿಗಳಿಗೆ ಕೊಕ್ಕರೆ ರೋಗ (RKT Vaccine) ಲಸಿಕೆಗಳನ್ನು ಉಚಿತವಾಗಿ ನೀಡಲಾಗುತ್ತಿದೆ.

9. ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆಯ ಅಧೀನದಲ್ಲಿ ಒಟ್ಟು 07 ಕುಕ್ಕುಟ ಕ್ಷೇತ್ರಗಳ ಮೂಲಕ ಒಂದು ವರ್ಷದಲ್ಲಿ 4.50 ರಿಂದ 5.00 ಲಕ್ಷಗಳಷ್ಟು ಒಂದರಿಂದ ಏಳು ದಿನಗಳ ಗಿರಿರಾಜ ಕೋಳಿ ಮರಿಗಳನ್ನು ರಿಯಾಯಿತಿ ದರದಲ್ಲಿ ರೈತರಿಗೆ ಒದಗಿಸಲಾಗುತ್ತಿದೆ.

10. ಕೋಳಿಗಳಿಗೆ ರೋಗ ರುಜಿನಗಳು ಬಂದಾಗ, ಪಶುವೈದ್ಯಾಧಿಕಾರಿಗಳ ಮೂಲಕ ಸೂಕ್ತ ಚಿಕಿತ್ಸೆಯನ್ನು ನೀಡಲಾಗುತ್ತಿದೆ.

11. ಕೋಳಿಗಳಿಗೆ ರೋಗರುಜಿನಗಳು ಕಂಡು ಬಂದಾಗಲಾಗಲಿ ಅಥವಾ ಅಸ್ವಾಭಿವಾಗಿ ಮರಣ ಹೊಂದಿದಾಗ ಸ್ಥಳೀಯ ಪಶುವೈದ್ಯಾಧಿಕಾರಿಗಳು ಕೋಳಿಗಳಿಂದ ಸೂಕ್ತ ಮಾದರಿಗಳನ್ನು ಸಂಗ್ರಹಿಸಿ (ಸೀರಂ ಮಾದರಿ / ಕ್ಲೋಯಿಕಲ್-ಟ್ರೇಕಿಯಲ್ ಮಾದರಿ / ಹಕ್ಕಿಹಿಕ್ಕೆ ಮಾದರಿ) ವಿಶ್ಲೇಷಣೆಗಾಗಿ ಪಶು ಆರೋಗ್ಯ ಮತ್ತು ಜೈವಿಕ ಸಂಸ್ಥೆ ಹೆಬ್ಬಾಳ ಇಲ್ಲಿಗೆ ಸಲ್ಲಿಸಲಾಗುತ್ತದೆ.

ಪ್ರಯೋಗಾಲಯದ ವರದಿಗಳ ಆಧಾರದ ಮೇಲೆ ಸೂಕ್ತ ಚಿಕಿತ್ಸೆ / ಲಸಿಕೆ ಕಾರ್ಯಕ್ರಮಗಳನ್ನು ನಿರ್ವಹಿಸಲಾಗುತ್ತಿದೆ.

**ಇ-ಪಸಂಮೀ 66 ಸಲೆವಿ 2022**

**ಪ್ರಭು ಬಿ. ಚವ್ಹಾಣ್**
**ಪಶುಸಂಗೋಪನೆ ಸಚಿವರು,**